**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 121/2019**

| | | |
|---|---|---|
| **ಸಾಕ್ಷಿದಾರನ ಹೆಸರು** | : ಡಾ. ಮಹದೇವ್ ಕೆ. | **ಪಿ.ಡಬ್ಲ್ಯೂ–** 11 |
| **ತಂದೆಯ ಹೆಸರು** | : ಕಾಳೇಗೌಡ | **ಸಿ.ಡಬ್ಲ್ಯೂ–** 29 |
| **ವಯಸ್ಸು** | : 47 ವರ್ಷ | |
| **ಉದ್ಯೋಗ** | : ವೈದ್ಯಾಧಿಕಾರಿ, ಮಣಿ ಆಸ್ಪತ್ರೆ, ಮೈಸೂರು. | |
| **ವಾಸಸ್ಥಳ** | : ವಿಜಯನಗರ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿಃ20.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-**

1. ಕೊಲಂಬಿಯಾ ಆಸ್ಪತ್ರೆ ಈಗ ಮಣಿಪಾಲ್ ಆಸ್ಪತ್ರೆಯಾಗಿದ್ದು, ಸದರಿ ಆಸ್ಪತ್ರೆಯಲ್ಲಿ ನಾನು ನವೆಂಬರ್ಃ– 2015 ರಿಂದ ಇಲ್ಲಿಯವರೆಗೆ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ–14.09.2018 ರಂದು ಈ ಪ್ರಕರಣದಲ್ಲಿ ಗಾಯಾಳುವಿನ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ನನ್ನನ್ನು ಪೊಲೀಸರು ಕರೆದಿದ್ದರು. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ನಾರಾಯಣಸ್ವಾಮಿಯ ಹೇಳಿಕೆಯಾಗಿದ್ದು, ಅದನ್ನು ನಿಶಾನೆ ಪಿ–36 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ–36(ಎ) ಎಂದು ಗುರುತಿಸಲಾಯಿತು. ನಾರಾಯಣಸ್ವಾಮಿ ಹೇಳಿಕೆ ನೀಡುವ ಕಾಲಕ್ಕೆ ಪ್ರಜ್ಞಾ ಸ್ಥಿತಿಯಲ್ಲಿದ್ದು, ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದರು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ–</u>**

**3.** ತಾವು ತಮ್ಮ ಜ್ಞಾಪನ ಶಕ್ತಿಯಿಂದ ಸಾಕ್ಷಿ ನುಡಿಯುತ್ತಿದ್ದಿರೋ? ಅಥವಾ ಕೇಸ್ ಶೀಟನ್ನು ತಂದಿರುತ್ತಿರಿಯೋ ಎಂದರೆ ಸಾಕ್ಷಿಯು ಕೇಸ್ ಶೀಟನ್ನು ತಂದಿರುತ್ತೇನೆ ಎಂದು ನುಡಿಯುತ್ತಾರೆ. ನಾರಾಯಣಸ್ವಾಮಿಯನ್ನು ಯಾವಾಗ? ಮತ್ತು ಎಷ್ಟು ಗಂಟೆಗೆ ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಲಾಯಿತು ಎಂದರೆ ಸಾಕ್ಷಿಯು ದಾಖಲೆ ನೋಡಿ ಆತನನ್ನು ದಿಃ– 13.09.2018 ರಂದು ರಾತ್ರಿ 10.52 ಗಂಟೆಗೆ ದಾಖಲಿಸಿಕೊಳ್ಳಲಾಯಿತು ಎಂದು ನುಡಿಯುತ್ತಾರೆ. ನಾರಾಯಣಸ್ವಾಮಿಯವರು ದಾಖಲಾದಾಗ ಆತನ ಸ್ಥಿತಿಯನ್ನು ನಾನು ನೋಡಿ ಪರೀಕ್ಷಿಸಿರುವುದಿಲ್ಲ.

**4.** ನಾನು ಮೊದಲ ಬಾರಿ ನಾರಾಯಣಸ್ಟಾಮಿಯವರನ್ನು ದಿಃ– 14.09.2018 ರಂದು ಬೆಳಿಗ್ಗೆ 8.30 ಗಂಟೆ ಸುಮಾರಿಗೆ ನೋಡಿರುತ್ತೇನೆ. ನಿಮಗೆ ನಾರಾಯಣಸ್ವಾಮಿರವರ ಸ್ಥಿತಿಯ ಬಗ್ಗೆ ದೃಡೀಕರಿಸುವಂತೆ ಯಾವಾಗ ಕೋರಿಕೆ ಪತ್ರ ಬಂದಿರುತ್ತದೆ ಎಂದರೆ ಸಾಕ್ಷಿಯು ಮದ್ಯಾಹ್ನ ಬಂದಿರುತ್ತದೆ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಎಷ್ಟು ಗಂಟೆಗೆ ದಾಖಲು ಮಾಡಿಕೊಳ್ಳಲಾಯಿತು, ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಇರುತ್ತದೆಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕೇಸ್ ಶೀಟ್ ನಲ್ಲಿ ಕೂಡ ಅದರ ಬಗ್ಗೆ ದಾಖಲೆ ದಾಖಲಾಗಿರುವುದಿಲ್ಲ.

**5.** ಗಾಯಾಳು ಹೇಳಿಕೆಯಲ್ಲಿರುವ ಸ್ಥಿತಿಯಲ್ಲಿ ಇರುವ ಬಗ್ಗೆ ದೃಡೀಕರಿಸುವ ಮುಂಚೆ ಆತನ ಎಲ್ಲಾ ಅಂಗಾಂಗಗಳನ್ನು ಪರೀಕ್ಷಿಸಿರುತ್ತೀರಿಯೋ? ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ಕೋರಿಕೆ ಪತ್ರ ಬಂದ ನಂತರ ಗಾಯಾಳುವಿನ ಅಂಗಾಂಗಗಳನ್ನು ಪರೀಕ್ಷಿಸಿರುವ ಬಗ್ಗೆ ದಾಖಲೆ ಇರುವುದಿಲ್ಲ.

**6.** ಡೋಕೋಮಿನ್ ಅಥವಾ ಅದಕ್ಕೆ ಸಮಾನವಾದ ಔಷಧಿಯನ್ನು ರೋಗಿಯಿಂದ ತೆಗೆದಾಗ ಅದರ ಪರಿಣಾಮ ಎಷ್ಟು ಗಂಟೆಯವರೆಗೆ ಇರುತ್ತದೆ ಎಂದರೆ ಸಾಕ್ಷಿಯು 15 ನಿಮಿಷದ ನಂತರ ಅದು ಕಡಿಮೆ ಆಗುತ್ತಾ ಬರುತ್ತದೆ ಎಂದು ನುಡಿಯುತ್ತಾರೆ. ಡೋಕೋಮಿನ್ ಔಷಧಿಯನ್ನು ರಕ್ತಸ್ರಾವ ಆಗುವುದನ್ನು ತಡೆಗಟ್ಟಲು ಮತ್ತು ಬಿಪಿ ಹೆಚ್ಚಿಗೆ ಮಾಡಲು ಮತ್ತು ರಕ್ತದ ಚಲನವನ್ನು ಸಮಪಡಿಸಲು ನೀಡಲಾಗುತ್ತದೆ ಎಂದರೆ ಸರಿ. ಈ ರೀತಿ ಔಷದಿ ನೀಡಿದಾಗ ಬಿ.ಪಿ ಹೆಚ್ಚುವುದರಿಂದ ಮೊದಲಿಗೆ ಮೆದುಳಿಗೆ ಪರಿಣಾಮವಾಗುತ್ತದೆ ಎಂದರೆ ಸರಿ. ಸದರಿ ಔಷದಿಯ ಪರಿಣಾಮದಿಂದ ಮೆದುಳಿನ ಕಾರ್ಯಕ್ಷಮತೆ ಹೆಚ್ಚು-ಕಡಿಮೆ ಆಗಬಹುದೆಂದರೆ ಸರಿ. ಅದೇ ರೀತಿ ರೋಗಿಯ ಮಾತುಗಳಲ್ಲಿಯೂ ಸಹ ಹೆಚ್ಚು-ಕಡಿಮೆ ಇಲ್ಲದಿರುವ ವಿಚಾರಗಳನ್ನು ಸಹ ಕಲ್ಪನೆ ಮಾಡಿಕೊಳ್ಳುವ ಸಂಭವ ಇರುತ್ತದೆ ಎಂದರೆ ಸರಿ.

**7.** ಈ ಪ್ರಕರಣದಲ್ಲಿ ಗಾಯಾಳುವಿನ ಹೇಳಿಕೆ ಪಡೆಯುವಾಗ ಸದರಿ ಮೇಲೆ ಹೇಳಿದ ಔಷಧಿಯನ್ನು ರೋಗಿಯಿಂದ ತೆಗೆದ ಬಗ್ಗೆ ಅಥವಾ ಅದರ ಪರಿಣಾಮ ಇದ್ದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಹೇಳಿಕೆ ನೀಡುವ ಮುಂಚೆ ಈ ಮೇಲೆ ಹೇಳಿದ ಎಲ್ಲಾ ರೋಗಿಯ ಸ್ಥಿತಿಗಳನ್ನು ಪರಿಶೀಲಿಸಿರುತ್ತಿರಿಯೋ ಎಂದರೆ ಸಾಕ್ಷಿಯು ಪರಿಶೀಲಿಸಿರುತ್ತೇನೆ, ಆದರೆ ಅದಕ್ಕೆ ಸಂಬಂಧಪಟ್ಟ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ರೋಗಿಗೆ ಔಷದಿ ನೀಡುವಾಗ ವೈದ್ಯರ ಸಲಹೆಯನ್ನು ಕೇಸ್ ಶೀಟಿನಲ್ಲಿ ನಮೂದಿಸಲಾಗಿದ್ದು, ಅದೇ ರೀತಿ

ಔಷದಿಯನ್ನು ನಿಲ್ಲಿಸುವ ಬಗ್ಗೆಯೂ ಸಹ ಕೇಸ್ ಶೀಟಿನಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಗಾಯಾಳುವಿಗೆ ಯಾವ ಔಷದಿ ನೀಡಲಾಗಿತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ, ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ತಂದಿರುವುದಿಲ್ಲ ಎಂದು ನುಡಿಯುತ್ತಾರೆ. ತಾವು ತಂದ ದಾಖಲೆಗಳ ಪ್ರಕಾರ ಈ ಮೇಲೆ ಹೇಳಿ ಔಷದಿ ಅಥವಾ ಅದರ ಸಮಾನ ಔಷದಿಯನ್ನು ರೋಗಿಗೆ ನೀಡಲಾಗಿದೆ ಎಂದರೆ ಸರಿ.

**8.** ಪೊಲೀಸರು ನೀಡಿರುವ ಕೋರಿಕೆ ಸಮಯ ಮತ್ತು ನೀವು ದೃಡೀಕರಿಸುವ ಸಮಯ ಒಂದೇ ಆಗಿರುತ್ತದೆಯೇ ಎಂದರೆ ಸಾಕ್ಷಿಯು 12.15 ಕೋರಿಕೆ ಪತ್ರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಸಮಯದಲ್ಲಿ ಗಾಯಾಳುವಿನ ಸ್ಥಿತಿಯ ಬಗ್ಗೆ ದೃಡೀಕರಿಸಿರುತ್ತಿರಿ ಎಂದರೆ ಸಾಕ್ಷಿಯು ಕೋರಿಕೆ ಪತ್ರದಲ್ಲಿಯೇ 12.15 ಕ್ಕೆ ಗಾಯಾಳುವಿನ ಸ್ಥಿತಿಯ ಬಗ್ಗೆ ಹೇಳಿಕೆ ನೀಡಿರುವ ಬಗ್ಗೆ ದೃಡೀಕರಿಸುತ್ತಾರೆ ಎಂದು ನುಡಿಯುತ್ತಾರೆ. ಗಾಯಾಳುವಿನ ಸ್ಥಿತಿಯ ಬಗ್ಗೆ ಪರೀಕ್ಷಿಸಲು ಅಂಗಾಂಗಳನ್ನು ಪರೀಕ್ಷಿಸಿರುವ ಬಗ್ಗೆ **Chart** ನಲ್ಲಿ ಗುರುತಿಸಲಾಗಿರುತ್ತದೆ. ಅದನ್ನು ನೀವು ಗುರುತಿಸಿರುತ್ತೀರಿಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**9.** ತಮ್ಮ ಹೇಳಿಕೆ ಪ್ರಕಾರ 12.15 ಕ್ಕೆ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಹೇಳಿದ್ದು ಅದನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ದಾಖಲಿಸಿರುತಾತರೆ ಎಂದರೆ ಸಾಕ್ಷಿಯು 12.15 ರ ನಂತರ ಹೇಳಿಕೆಯನ್ನು ಪಡೆಯಲು ಪ್ರಾರಂಭಿಸಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಮುಕ್ತಾಯಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು

ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಗಾಯಾಳು ತನ್ನ ಗಾಯಗಳಾಗಿದ್ದ ಕೈಗಳಿಂದ ಹೇಳಿಕೆಗೆ ಸಹಿ ಮಾಡುವ ಸ್ಥಿತಿಯಲ್ಲಿದ್ದನೇ? ಎಂದರೆ ಸಾಕ್ಷಿಯು ಆತನ ಬಲಗೈ ಸರಿ ಇತ್ತು ಎಂದು ನುಡಿಯುತ್ತಾರೆ. ಯಾವುದೇ ದಾಖಲೆಯನ್ನು ಒಂದು ಸ್ಥಳದಲ್ಲಿ ತಯಾರಿಸಿ ಅದನ್ನು ಇನ್ನೊಂದು ಸ್ಥಳದಲ್ಲಿ ಸಹಿ ಮಾಡುವುದಾದರೆ ಸದರಿ ದಾಖಲೆ ಮೇಲೆ ಸಹಿ ಮಾಡುವ ಸ್ಥಳವನ್ನು ಗುರುತಿಸಲಾಗುತ್ತದೆ ಎಂದರೆ ಸರಿ. ಆ ರೀತಿಯ ಗುರುತು ನಿಶಾನೆ ಪಿ–36 ಗಾಯಾಳುವಿನ ಹೇಳಿಕೆಯಲ್ಲೂ ಸಹ ಕಾಣುತ್ತದೆ ಎಂದರೆ ಸರಿ.

**10.** ಹೇಳಿಕೆ ದಾಖಲಿಸಿಕೊಳ್ಳಲಾಯಿತು ಎಂದು ಹೇಳಿದ್ದು ಆ ಸಮಯದಲ್ಲಿ ಯಾರು ಹಾಜರಿದ್ದರು ಎಂದರೆ ಸಾಕ್ಷಿಯು ನಾನು, ಗಾಯಾಳು ಮತ್ತು ಪೊಲೀಸರು ಹಾಜರಿದ್ದೆವು ಎಂದು ನುಡಿಯುತ್ತಾರೆ. ಹೇಳಿಕೆ ಪಡೆಯುವ ಸ್ಥಳಕ್ಕೆ ನಾನು ಸೀಲನ್ನು ತೆಗೆದುಕೊಂಡು ಹೋಗುವುದಿಲ್ಲ. ನಿಶಾನೆ ಪಿ–36 ರಲ್ಲಿ ನನ್ನ ಕಚೇರಿಗೆ ಹೋಗಿ ಅಲ್ಲಿ ಸಹಿ ಮಾಡಿ ಸೀಲನ್ನು ಹಾಕಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ 2, 3, 4 ಮತ್ತು 5 ನೇ ಆರೋಪಿ ಪರ ವಕೀಲರಿಂದಃ–**

**11.** ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇವೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/–**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**